**Q.P. Code – 50101**

**ಪ್ರಥಮ ಬಿ.ಎ./ಬಿ.ಕಾಂ./ಬಿ.ಎಸ್ಸಿ., ಪದವಿ ಪರೀಕ್ಷೆ**

**ಅಕ್ಟೋಬರ್/ನವೆಂಬರ್ 2015**

**(ಅಂಚೆ ಮತ್ತು ತೆರಪಿನ ಶಿಕ್ಷಣ)**

**ಕನ್ನಡ ಭಾಷಾ ಪತ್ರಿಕೆ – ೧**

**(DAA/DCA/DSA 010) – ಹೊಸಗನ್ನಡ ಕವಿತೆಗಳು, ಶೂದ್ರ ತಪಸ್ವಿ, ಬೆಟ್ಟದ ಜೀವ, ಆಡಳಿತ ಕನ್ನಡ**

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 70/80*

1. (ಅ) **ಒಂದರ** ಭಾವ ಸ್ವಾರಸ್ಯವನ್ನು ಸಂದರ್ಭದೊಡನೆ ವಿವರಿಸಿ : **04**

(೧) ಕ್ಯೂ ನಿಲ್ಲು; ಫುಟ್‌ಪಾತಿನಲ್ಲೇ ಸಂಚರಿಸು;
ರಸ್ತೆ ದಾಟುವಾಗೆಚ್ಚರಿಕೆ; ಓಡು, ಎಲ್ಲಿಯೂ
ನಿಲ್ಲದಿರು; ಹೇಗೋ ಅವರಿವರ ತಳ್ಳಿ ಮುನ್ನುಗ್ಗು;
ಎಲ್ಲಾದಿರೂ ಸರಿಯೆ, ಬೇರೂರು, ಹೀರು

(೨) ಪಾಲ್ ಪೂಜ್ಯ ಮಾದೊಡಂ
ಜೀವಾತುವಾದೊಡಂ
ತ್ಯಾಜ್ಯಮಾ ನಾಯ ಪಾಲ್
ನಾಯ ಪಾಲ್ಗೆಣೆ ಶೂದ್ರನ ತಪಂ

(ಆ) **ಎಂಟು** ಪದಗಳಿಗೆ ಅರ್ಥ ಬರೆಯಿರಿ : **$8 \times \frac{1}{2} = 04$**

ಕೂವು, ಗೃಧ್ರ, ಚವರಿ, ಸಮರ, ಬಿಂಕ, ಬಾಂದಳ, ನಳಿಗೆ, ಕಜ್ಜ, ಪೀರ್ವ, ಅನೃತ, ನೇಸರ್, ಅಣ್ಮು.

(ಇ) **ಎರಡಕ್ಕೆ** ಟಿಪ್ಪಣಿ ಬರೆಯಿರಿ : **2 × 2 = 04**

ಮದಲಿಂಗ, ವೃಕ್ಷ ಭೈರವ, ತೆಂಕಣಗಾಳಿ.

2. **ನಾಲ್ಕಕ್ಕೆ** ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ : **4 × 3 = 12**

(೧) ಗಂಧರ್ವರಾ ಸೀಮೆಯಾಯಿತು, ಕಾಡಿನ ನಾಡು
(೨) ಕಳೆಯುವಳು ಆಯುಷ್ಯ ಬೊಟ್ಟು ಬೊಟ್ಟು
(೩) ಎಲ್ಲೆಲ್ಲೂ ನನ್ನ ಜನ ನೀರಿನಂತೆ ನಿಂತರು
(೪) ದೊರೆಯ ದೋಷಮೆ ಕಾರಣಂ ಪ್ರಜಾ ಸಂಕಟಕೆ!
(೫) ತಪೋಮಹಿಮೆಗೆಣೆಯುಂಟೆ?
(೬) ಶಂಬೂಕ ಋಷಿಯ ಗೌರವಕಾಗಿ ಬಂದೆನಯ್.

3. ಪ್ರೀತಿ ಮತ್ತು ಕರುಣೆಗಳ, ನೆಲೆ–ಬೆಲೆಗಳನ್ನು 'ನನ್ನ ನಾಯಿ' ಕವಿತೆ ಹೇಗೆ ಬಿಂಬಿಸುತ್ತದೆ – ವಿವರಿಸಿ. **08**

ಅಥವಾ

ಮನೆಯಿಂದ ಮನೆಗೆ ಕವನದಲ್ಲಿ ವ್ಯಕ್ತವಾಗಿರುವ ಮಧ್ಯಮ ವರ್ಗದ ಸಂಸಾರದ ಚಿತ್ರಣವನ್ನು ನಿರೂಪಿಸಿ.

4. ಶೂದ್ರನ ತಪಸ್ಸಿಗೂ ಬ್ರಾಹ್ಮಣ ಕುಮಾರನ ಸಾವಿಗೂ ಯಾವ ಬಗೆಯ ಸಂಬಂಧಗಳಿವೆ ತಿಳಿಸಿ. **08**

ಅಥವಾ

ರಾಮ–ಬ್ರಾಹ್ಮಣರ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ಬರೆಯಿರಿ.

5. (೧) ಗೋಪಾಲಯ್ಯ ಮತ್ತು ಶಂಕರಮ್ಮನ ದಾಂಪತ್ಯ ಜೀವನದ ಸೊಗಸನ್ನು ವಿವರಿಸಿ. **10**

ಅಥವಾ

ಗೋಪಾಲಯ್ಯನವರ ಜೀವನೋತ್ಸಾಹವನ್ನು ಉದಾಹರಣೆಯೊಂದಿಗೆ ಸ್ಪಷ್ಟಪಡಿಸಿ.

(೨) ಕಾದಂಬರಿಯಲ್ಲಿ ಬರುವ ನಿರೂಪಕರ ಪಾತ್ರದ ಮಹತ್ವವನ್ನು ಚಿತ್ರಿಸಿ. **10**

ಅಥವಾ

ಗೋಪಾಲಯ್ಯನವರಿಂದ ರೂಪುಗೊಂಡ ನಾರಾಯಣ ಹಾಗೂ ಲಕ್ಷ್ಮಿಯರ ಬದುಕನ್ನು ಪರಿಚಯಿಸಿ.

6. (ಅ) ಜ್ಞಾಪಕ ಪತ್ರ ಎಂದರೇನು? **02**

(ಆ) ಸುತ್ತೋಲೆ ಎಂದರೇನು? ಸುತ್ತೋಲೆಯ ಮಾದರಿಯೊಂದನ್ನು ರಚಿಸಿ. **04**

(ಇ) ಅರೆ ಸರ್ಕಾರಿ ಪತ್ರದ ಸ್ವರೂಪ ತಿಳಿಸಿ. **04**

7. ಯಾವುದಾದರೂ **ಒಂದು** ಪ್ರಶ್ನೆಗೆ ಉತ್ತರಿಸಿ : **10**

(**80** ಅಂಕಗಳ ಸ್ಕೀಮ್‌ನವರಿಗಾಗಿ **ಕಡ್ಡಾಯ** ಪ್ರಶ್ನೆ) :

(೧) ಸರ್ಕಾರಿ ಪತ್ರದ ವಿವಿಧ ಅಂಗಗಳನ್ನು ಅವುಗಳ ಪ್ರಾಮುಖ್ಯತೆಯೊಂದಿಗೆ ಪರಿಚಯಿಸಿ.

ಅಥವಾ

ಅರ್ಜಿ ಎಂದರೇನು? ನಿವಾಸ ಮಂಜೂರಾತಿಯನ್ನು ಕೋರಿ ಕಚೇರಿಯ ಮುಖ್ಯ ಅಧಿಕಾರಿಗೆ ಅರ್ಜಿಯೊಂದನ್ನು ಬರೆಯಿರಿ.

---